**1 ಬೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**MVC No.1374/2023**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ನಿತಿನ್ ಎ ಬಿ | ಪಿ ಡಬ್ಲ್ಯೂ | 03 |
| ತಂದೆ ಹೆಸರು | : | ಅನಂತ ಬಿ | | |
| ವಯಸ್ಸು | : | 53 ವರ್ಷ | | |
| ಉದ್ಯೋಗ | : | ಎಸ್ ಎಸ್ ಐ ಎನ್ ಎಸ್ ಆಸ್ಪತ್ರೆ, ಕಿಲು ಮೂಳೆ ತಜ್ಞರು | | |
| ವಾಸ ಸ್ಥಳ | : | ದಾವಣಗೇರೆ | | |

**ದಿನಾಂಕ: 27.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 268 | ಅಂಗನ್ಯೂನತಾ ಪ್ರಮಾಣ ಪತ್ರ |
| ನಿ ಪಿ 268(ಎ) | ಸಾಕ್ಷಿಯ ಸಹಿಯನ್ನು |

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ವಕೀಲರಿಂದಃ

ಅಪಘಾತವಾದ ತಕ್ಷಣ ನಾನು ಅರ್ಜಿದಾರಳಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ನಾನು ಸುಮಾರು ಪ್ರಕರಣಗಳಲ್ಲಿ ಅಂಗನ್ಯೂನತಾ ಪ್ರಮಾಣ ಪತ್ರ ನೀಡಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ನನಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ ಎಂದರೆ ಸರಿ. ನಾನು ಎಸ್ ಎಸ್ ಐ ಎನ್ ಎಸ್ ಆಸ್ಪತ್ರೆ ದಾವಣಗೇರೆ ಯಲ್ಲಿ ಕಿಲೂ ಮೂಳೆ ಶಸ್ತ್ರ ಚಿಕಿತ್ಸಕ ಎಂದು ಕೆಲಸ

ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿದ ಹಾಗೆ ನಾನು Ortho, Trouma, Reconstruction Consultant ಆಗಿ ಸದರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ನಾನು Ortho, Trouma, Reconstruction ಸರ್ಜನ್ ಅಲ್ಲ ಎಂದರೆ ಸರಿ. ನಾನು ಅರ್ಜಿದಾರರನ್ನು ಪರೀಕ್ಷಿಸಬೇಕಾದರೆ ಅವಳ ಗಾಯದ ಪ್ರಮಾಣ ಪತ್ರ ಮತ್ತು ಡಿಸ್ ಚಾರ್ಜ ಸಮರಿಯನ್ನು ನೋಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರ ಮತ್ತು ಡಿಸ್ ಚಾರ್ಜ ಸಮರಿಯಲ್ಲಿ ಅರ್ಜಿದಾರಳಿಗೆ ಮೂಳೆ ಮುರಿತ ಗಾಯ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿಯವರಿಗೆ ಮೂಳೆ ಮುರಿತದ ಗಾಯ ಆಗಿರುತ್ತವೆ ಎನ್ನುತ್ತಾರೆ.

2. ಅರ್ಜಿದಾರಳನ್ನು ನಾನು ಕೇವಲ ಅಂಗನ್ಯೂನತೆ ನಿರ್ದರಿಸಲು ಪರೀಕ್ಷಿಸುತ್ತೇನೆ ಎಂದರೆ ಸರಿ. ಅರ್ಜಿದಾರರನ್ನು ಪರೀಕ್ಷಿಸುವ ಕಾಲಕ್ಕೆ ಅವಳಿಗೆ ಹಿಪ್ಪ ಬೋನ್ ಮುಮೆಂಟ ಇರಲಿಲ್ಲ. ನಾನು ಅರ್ಜಿದಾರಳ ಅಂಗನ್ಯೂತೆಯನ್ನು ಅವಳ ಮೂಳೆ ಮುರಿತಕ್ಕೆ ಸಬಂಧಿಸಿದಂತೆ ಮಾತ್ರ ನೀಡಿರುತ್ತೇನೆ. ಸದರಿ ಅರ್ಜಿದಾರಳ ಗಾಯ ಪ್ರಮಾಣ ಪತ್ರದಲ್ಲಿ ಸದರಿ ಅವರಿಗೆ ಚಿಕಿತ್ಸೆ ನೀಡಿದ ವೈದ್ಯರು ಎಕ್ಸ ರೇ ತೆಗೆದು ಚಿಕಿತ್ಸೆ ನೀಡಿರುತ್ತಾರೆ. ಸದರಿ ಎಕ್ಸ ರೇಗಳನ್ನು ನಾನು ನೋಡಿಲ್ಲ. ಅಂಗನ್ಯೂನತೆ ನಿರ್ಧರಿಸಬೇಕಾದರೆ ಗಾಯದ ಪ್ರಮಾಣ ಪತ್ರ, ಡಿಸ್ ಚಾರ್ಜ ಸಮರಿ ಅದರ ಜೊತೆ ಎಕ್ಸ ರೇ ಸಹ ಒಂದು ಮುಖ್ಯವಾದ ದಾಖಲೆ ಎಂದರೆ ಸರಿ. ನಾನು ಈ ದಿನ ನೀಡಿದ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ನಮೂದಿಸಿದ ಗಾಯಕ್ಕೆ ಸಂಬಂಧಿಸಿದಂತೆ ನಿಪಿ-267 ಅಂಗನ್ಯೂನತಾ ಪ್ರಮಾಣ ಪತ್ರದಲ್ಲಿಯೂ ಸಹ ಆ ಗಾಯ ನಮೂದು ಇದೆ ಎಂದರೆ ಸರಿ. ಅರ್ಜಿದಾರಳಿಗೆ ಒಂದಕ್ಕಿಂತ ಹೆಚ್ಚು ಬಾರಿ ಶಸ್ತ್ರ ಚಿಕಿತ್ಸೆ ಆದ್ದರಿಂದ ಅವರ ಸೊಂಟದ ಭಾಗದಲ್ಲಿ ಚರ್ಮ ಕಸಿ ಮಾಡಲಾಗಿದೆ. ಸದರಿ ಚರ್ಮ ಕಸಿಯ ವಿಸ್ತೀರ್ಣ ನನ್ನ ಅಂಗನ್ಯೂನತಾ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ ಸದರಿ ಚರ್ಮದ ಕಸಿಯ ವಿಸ್ತೀರ್ಣಕ್ಕೆ ಅನುಗುಣವಾಗಿ ಅವರ ಅಂಗನ್ಯೂತೆ ಹೆಚ್ಚು ಅಥವಾ ಕಡಿಮೆ ಆಗುತ್ತದೆ ಎಂದರೆ ಸರಿ. ಸದರಿ ಚರ್ಮ ಕಸಿ ಮಾಡುವುದರಿಂದ ರೋಗಿಯ ಚಲನ ವಲನದಲ್ಲಿ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ನಡೆದಾಡಲು ಹಾಗೂ ನಿಂತುಕೊಳ್ಳಲು ತೊಂದರೆ ಆಗುತ್ತದೆ ಎಂದು ಅವರ ಹೇಳಿಕೆಯ ಮೇರೆಗೆ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಮೊಬಿಲಿಟಿ ಕಂಪೋನಂಟ್ ನೋಡಬೇಕಾದರೆ ಮೌಂಸ ಖಂಡಗಳಲ್ಲಿ ಶಕ್ತಿಯನ್ನು ನೋಡಬೇಕಾಗುತ್ತದೆ ಎಂದರೆ ಸರಿ. ಸದರಿ ನನ್ನ ಪ್ರಮಾಣ ಪತ್ರದಲ್ಲಿ ಸದರಿ ಅರ್ಜಿದಾರಳ ಮೌಂಸ ಖಂಡಗಳಲ್ಲಿ ಶಕ್ತಿ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಹಾಗೂ ಸರಾಸರಿ ಮೌಂಸ ಖಂಡಗಳಲ್ಲಿ ಶಕ್ತಿ ನಷ್ಟ ಎಷ್ಟು

ಎಂದು ನನ್ನ ಪ್ರಮಾಣ ಪತ್ತದಲ್ಲಿ ಕಾಣಿಸಿಲ್ಲ ಎಂದರೆ ಸರಿ. ಅಂಗನ್ಯೂನತೆಯನ್ನು ನಿರ್ಧರಿಸಬೇಕಾದರೆ ದೃಢತೆ ಸಾಮರ್ಥ್ಯ ಹಾಗೂ ಇತರೇ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಅವುಗಳ ಬಗ್ಗೆ ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಕೀಲಿಗೆ ಸಂಬಂಧಿಸಿದಂತೆ ಎ ಮತ್ತು ಬಿ ಗಳ ಅಳತೆಯನ್ನು ನೋಡಬೇಕಾದರೆ ಕೀಲಿನ ಸಾಮಾನ್ಯ ಅಳತೆ, ಕ್ರಿಯಾಶೀಲತೆ ಹಾಗೂ ನಷ್ಟವನ್ನು ಪರಿಗಣಿಸಬೇಕಾಗುತ್ತದೆ ಎಂದರೆ ಸರಿ. ಸದರಿ ಅವುಗಳ ಅಳತೆಯನ್ನು ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ ಸದರಿ ಈ ಮೇಲೆ ಹೇಳಿದ ಯಾವುದೇ ನ್ಯೂನತೆ ಅರ್ಜಿದಾರಳಲ್ಲಿ ಕಂಡು ಬರದೇ ಇದ್ದುದ್ದರಿಂದ ಅವುಗಳ ಗ್ಗೆ ನಾನು ನಮೂದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಎ ಮತ್ತು ಬಿ ಗಳ ಅಳತೆಯನ್ನು ಯಾವುದೇ ಆಧಾರವಿಲ್ಲದೇ ತಪ್ಪು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ನೀಡಿದ ಅಂಗನ್ಯೂನತೆ ಅರ್ಜಿದಾರಳ ನಿರ್ದಿಷ್ಟ ಭಾಗಕ್ಕೆ ನೀಡಿದ ಅಂಗನ್ಯೂನತೆ ಎಂದರೆ ಸರಿ ಸದರಿ ಅಂಗನ್ಯೂನತೆ ಇಡೀ ದೇಹಕ್ಕೆ ಹೊಲಿಸಿದರೆ ಕಡಿಮೆಯಾಗುತ್ತದೆ. ಎಷ್ಟು ಕಡಿಮೆ ಆಗುತ್ತದೆ ಎಂದು ಹೇಳಲು ಬರುವುದಿಲ್ಲ. ನಾನು ಅರ್ಜಿದಾರಳನ್ನು ಪರೀಕ್ಷಿಸಿದಾಗ ಅವರಿಗೆ ಯಾವುದೇ ಅಂಗನ್ಯೂನತೆ ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಅರ್ಜಿದಾರಳನ್ನು ಪರೀಕ್ಷಿಸಬೇಕಾದರೆ ಎಕ್ಸ ರೇ ತೆಗೆಸಿರುವುದಿಲ್ಲ. ಸದರಿ ಎಕ್ಸ ರೇ ಯಲ್ಲಿ ಅರ್ಜಿದಾರಳ ಮೂಳೆ ಮುರಿತ ಸರಿಯಾಗಿ ಜೋಡಣೆ ಆಗದೇ ಇರುವುದು ಕಂಡು ಬಂದಿರುತ್ತದೆ. ಆ ಬಗ್ಗೆ ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ಎಕ್ಸ ರೇಯನ್ನು ನೋಡಿದಾಗ ಅರ್ಜಿದಾರಳ ಮೂಳೆ ಮುರಿತ ಸರಿಯಾಗಿ ಜೋಡಣೇ ಆಗದೇ ಇರುವುದು ಕಂಡು ಬಂದಿಲ್ಲ ಆದ್ದರಿಂದ ಆ ಬಗ್ಗೆ ನಾನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ಯಾವುದೇ ಅಂಗನ್ಯೂನತೆ ಇಲ್ಲದೇ ಇದ್ದರೂ ಸಹ ಅವಳಿಗೆ ಅನುಕೂಲವಾಗಲೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>: ಮರುವಿಚಾರಣೆ : ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್